ಇ) ಹೌದು.

ಈ) ಕಳೆದ ಮೂರು ವರ್ಷಗಳಿಂದ ಈ ಕೆಳಕಂಡಂತೆ ಅನುದಾನವನ್ನು ಒದಗಿಸಲಾಗಿದೆ :—

೧೯೮೬–೮೭ : ೫,೦೦೦ ರೂ. ಗಳು
೧೯೮೭–೮೮ : ೫೦,೦೦೦ ರೂ.ಗಳು
೧೯೮೮–೮೯ : ೨೦,೦೦೦ ರೂ. ಗಳು.

ಉ) ಇಲ್ಲ. ಆದರೆ ಅನ್ವೇಷಣೆಯ ಸಮಯದಲ್ಲಿ ಕಾಮಗಾರಿಯು ತಾಂತ್ರಿಕವಾಗಿ ಅಸಾಧುವಾಗಿದೆ ಎಂದು ಕಂಡು ಬಂದಿದೆ.

ವರದಿಯನ್ನೊಪ್ಪಿಸುವುದು

ಶ್ರೀ ಬಿ. ಜೆ. ಜಮಖಂಡಿ.—ಮಾನ್ಯ ಅಧ್ಯಕ್ಷರೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗ ಕಲ್ಯಾಣ ಸಮಿತಿಯ ೧೦ನೇ ವರದಿಯನ್ನೊಪ್ಪಿಸುತ್ತಿದ್ದೇನೆ.—

ಅಧ್ಯಕ್ಷರು.—ವರದಿಯನ್ನೊಪ್ಪಿಸಲಾಯಿತು.

ಅರ್ಜಿಯನ್ನೊಪ್ಪಿಸುವುದು

ಶ್ರೀ ಕೆ. ಕುಲಾಲ.—ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಆಯೋಗ ರಚಿಸುವ ಬಗ್ಗೆ ಅರ್ಜಿಯನ್ನೊಪ್ಪಿಸುತ್ತೇನೆ.

ಅಧ್ಯಕ್ಷರು.—ಅರ್ಜಿಯನ್ನೊಪ್ಪಿಸಲಾಯಿತು.

ನಿಲುವಳಿ ಸೂಚನೆಗೆ ಅನುಮತಿ ಕೋರಿಕೆ

ಸ್ಟೆ ಪೈಂಡರಿ ಪದವಿಧರರ ಬೇಡಿಕೆಗಳ ಬಗ್ಗೆ

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೆ, ನಾನು ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿಕೊಟ್ಟಿದ್ದೆ. ಸ್ಟೆಪೆಂಡರಿ ಪದವೀಧರರು ಅಲ್ಲಿ ಸುಮಾರು ೫–೬ ಸಾವಿರ ಜನರು ಧರಣಿಯನ್ನು ಕೂತಿದ್ದಾರೆ. ಕಾರಣ ತಮ್ಮ ನ್ಯಾಯಯುತ ಬೇಡಿಕೆಗಳನ್ನು ಈ ದೇಶಿಸಬೇಕು. ಇದರ ಬಗ್ಗೆ ಬಹಳ ದಿವಸಗಳಿಂದಲೂ ಸರ್ಕಾರದಿಂದ ಆಶ್ವಾಸನೆಗಳು ಬರುತ್ತಲೇ ಇವೆ. ಕಳೆದ ೧೧ವರ್ಷಗಳಿಂದ ಅವರನ್ನು ಖಾಯಂ ಮಾಡದೆ ಅವರಿಗೆ ಕೊಡಬೇಕಾದ ಅನುಕೂಲಗಳನ್ನು ಕೊಡದೇ ಇರುವುದರಿಂದ ಅವರು ಇವತ್ತು ತಮ್ಮನ್ನು ಖಾಯಂ ಮಾಡಬೇಕೆಂದು ಕೇಳುತ್ತಿದ್ದಾರೆ. ಅವರ ಜೊತೆಯಲ್ಲೇ ಕೆಲಸ ಮಾಡುವ ಬೇರೆ ಖಾಯಂ ನೌಕರರಿಗೆ ಕೊಟ್ಟಿರುವ ಸೌಲಭ್ಯಗಳನ್ನು ತಪ್ಪಿಗೂ ಕೊಡಬೇಕೆಂದು ಕಳೆದ ಹಲವಾರು ವರ್ಷಗಳಿಂದ ಕೇಳಿ ಕೇಳಿ ಅವರು ಈಗ ಕಂಗಾಲಾಗಿದ್ದಾರೆ. ಅವರು ಶಾಸಕರ ರೂಮುಗಳಿಗೆ ನುಗ್ಗುತ್ತಿದ್ದಾರೆ ಇದು ಸರಿಯೆ ?

(ಗೊಂದಲ)

ಅಧ್ಯಕ್ಷರು.—ತಾವು ದಯವಿಟ್ಟು ಕೂಡಿ. ನಾನು ಬೇಳುತ್ತೇನೆ.

(ಗೊಂದಲ)

ಅಧ್ಯಕ್ಷರು.—ನಥಿಂಗ್ ವಿಲ್ ಬಿ ಗೋ ಆನ್ ರೆಕಾರ್ಡ್.

(ಗೊಂದಲ)